# ಸಂಸಾರದಲ್ಲಿ ಹೇಗಿರಬೇಕು?



ಎಲ್ಲಾ ಕೆಲಸ ಕಾರ್ಯಗಳನ್ನೂ ಮಾಡು, ಆದರೆ ಮನಸ್ಸನ್ನು ಮಾತ್ರ ಭಗವಂತನ ಪಾದಪದ್ಮಗಳಲ್ಲಿ ಇಡು. ಎಲ್ಲರೊಡನೆ, ಅಂದರೆ ಹೆಂಡತಿ, ಮಕ್ಕಳು, ತಂದೆ ತಾಯಿ, ಇವರೊಡನೆ ಇರು. ಅವರ ಸೇವೆ ಮಾಡು. ಅವರೆಲ್ಲಾ ನಿನ್ನ ಪರಮ ಆಪ್ತರೆಂದೇ ಕಾಣು, ಆದರೆ ಮಾತ್ರ ಅವರಾರು ನಿನಗೆ ಸೇರಿದವರಲ್ಲ ಎಂಬುದು ನಿನ್ನ ಹೃದಯಾಂತರಾಳದಲ್ಲಿ ನೆಲೆಸಿರಲಿ.

ನಿರ್ಲಿಪ್ತರಾಗಿ ಈ ಸಂಸಾರದಲ್ಲಿ ಇರುವುದು ಎಂದರೆ ಬಹಳ ಕಠಿಣ. ಒಮ್ಮೆ ಪ್ರತಾಪಚಂದ್ರ ನನಗೆ ಹೇಳಿದ: "ಮಹಾಶಯರೆ, ನಮ್ಮ ಆದರ್ಶ ಪುರುಷ ಜನಕರಾಜ. ಆತ ಈ ಸಂಸಾರದಲ್ಲಿ ನಿರ್ಲಿಪ್ತನಾಗಿ ಇದ್ದ. ನಾವೂ ಆತನ ಹಾಗೆಯೇ ಇರಲು ಪ್ರಯತ್ನಿಸುತ್ತೇವೆ." ನಾನು ಹೇಳಿದೆ: "ಸುಮ್ಮನೆ ಹಾಗೆ ಭಾವಿಸಿಕೊಂಡು ಬಿಟ್ಟರೆ ಜನಕರಾಜನಂತಿರಲಾಗುವುದೇ? ಆತ ಎಷ್ಟೊಂದು ತಪಸ್ಸು ಮಾಡಿ ಬ್ರಹ್ಮಜ್ಞಾನವನ್ನು ಪಡೆದುಕೊಂಡಿದ್ದ! ಶೀರ್ಷಾಸನದಲ್ಲಿ ಬಹಳ ವರ್ಷಗಳ ಕಾಲ ಘೋರ ತಪಸ್ಸು ಮಾಡಿ ಅನಂತರ ಬಂದು ಸಂಸಾರದಲ್ಲಿ ಇರಲಾರಂಭಿಸಿದ."

ಹಾಗಾದರೆ ಸಂಸಾರಿಗಳಿಗೆ ಮಾರ್ಗವೇ ಇಲ್ಲ ಅಂತಲೇನು? ಅವಶ್ಯವಾಗಿ ಇದೆ. ಆಗಾಗ ಕೆಲವು ದಿನಗಳ ಮಟ್ಟಿಗೆ ನಿರ್ಜನ ಪ್ರದೇಶದಲ್ಲಿ ಸಾಧನೆ ಮಾಡಬೇಕು. ಆಗ ಭಕ್ತಿ ದೊರೆಯುತ್ತದೆ, ಜ್ಞಾನ ದೊರೆಯುತ್ತದೆ. ಬಳಿಕ ಹೋಗಿ ಸಂಸಾರದಲ್ಲಿ ಇದ್ದರೆ ಯಾವ ತೊಂದರೆಯೂ ಆಗದು. ನಿರ್ಜನ ಪ್ರದೇಶದಲ್ಲಿ ಸಾಧನೆ ಮಾಡುವಾಗ ಸಂಸಾರ ಸಂಬಂಧವನ್ನು ಸಂಪೂರ್ಣವಾಗಿ ತ್ಯಜಿಸಿ ಬಿಡಬೇಕು. ಹೆಂಡತಿ, ಮಗ, ಮಗಳು, ತಾಯಿ, ತಂದೆ, ಸೋದರ, ಸೋದರಿ, ಗೆಳೆಯರು, ಸ್ವಬಾಂಧವರು ಯಾರೂ ಹತ್ತಿರ ಸುಳಿಯದ ಹಾಗೆ ನೋಡಿಕೊಳ್ಳಬೇಕು. ಹಾಗೆ ಸಾಧನೆ ಮಾಡುವಾಗ ಭಾವಿಸಬೇಕು: "ನನಗೆ ಈ ಜಗತ್ತಿನಲ್ಲಿ ಯಾರೆಂದರೆ ಯಾರೂ ಇಲ್ಲ. ಭಗವಂತನೇ ನನ್ನ ಸರ್ವಸ್ವ." ಅಳುತ್ತ ಅಳುತ್ತ ಜ್ಞಾನ ಭಕ್ತಿಗಳಿಗಾಗಿ ಭಗವಂತನನ್ನು ಪ್ರಾರ್ಥಿಸಬೇಕು.

ಎಷ್ಟು ದಿನಗಳ ಮಟ್ಟಿಗೆ ಸಂಸಾರವನ್ನು ಬಿಟ್ಟುಹೋಗಿ ನಿರ್ಜನ ಪ್ರದೇಶದಲ್ಲಿ ಇರಬೇಕು ಎಂದು ನೀವು ಪ್ರಶ್ನಿಸುವುದಾದರ, ನನ್ನ ಉತ್ತರ, ಹಾಗೆ ಕೇವಲ ಒಂದು ದಿನವಿದ್ದರೂ ಶ್ರೇಯಸ್ಕರವಾದುದೆ. ಮೂರು ದಿನಗಳ ಮಟ್ಟಿಗೆ ಇನ್ನೂ ಒಳ್ಳೆಯದೆ. ಸಾಧ್ಯವಾದರೆ ಹನ್ನೆರಡು ದಿನಗಳನ್ನು, ಒಂದು ತಿಂಗಳನ್ನು, ಮೂರು ತಿಂಗಳನ್ನು, ಒಂದು ವರ್ಷವನ್ನು—ತಮ್ಮ ತಮ್ಮ ಅನುಕೂಲಕ್ಕೆ ತಕ್ಕಂತೆ, ಏಕಾಂತದಲ್ಲಿ ಕಳೆದು, ಜ್ಞಾನ-ಭಕ್ತಿಗಳನ್ನು ಪಡೆದುಕೊಂಡು ಸಂಸಾರದಲ್ಲಿ ಬಂದು ಇದ್ದರೆ ವಿಶೇಷವಾಗೇನೂ ಹೆದರಬೇಕಾಗಿಲ್ಲ.

ನೋಡು, ನಿರ್ಜನ ಪ್ರದೇಶಕ್ಕೆ ಹೋಗಿ ಈ ಮನಸ್ಸನ್ನು ಭಗವಂತನ ಧ್ಯಾನದಲ್ಲಿ ತೊಡಗಿಸುವುದಾದರೆ, ಅದು ಜ್ಞಾನ, ಭಕ್ತಿ, ವೈರಾಗ್ಯ ಇವನ್ನು ಗಳಿಸಿಕೊಳ್ಳುತ್ತದೆ; ಸಂಸಾರದಲ್ಲಿ ತೊಡಗಿಸುವುದಾದರೆ ಇದೇ ಮನಸ್ಸು ಅಧೋಗತಿಗೆ ಇಳಿದುಬಿಡುತ್ತದೆ. ಸಂಸಾರದಲ್ಲಿ ಕೇವಲ ಒಂದೇ ಒಂದರ ಚಿಂತನೆ: "ಕಾಮ ಕಾಂಚನ"ದ ಚಿಂತನೆ. ಸಂಸಾರ ನೀರಿನಂತೆ, ಮನಸ್ಸೆಂಬ ಹಾಲನ್ನು ನೀರಿಗೆ ಸೇರಿಸಿದರೆ ಅವೆರಡೂ ಬೆರೆತು ಒಂದಾಗಿ ಬಿಡುತ್ತವೆ; ಮತ್ತೆ ಶುದ್ಧ ಹಾಲು ಬೇಕೆಂದರೆ ಕಣ್ಣಲ್ಲಿ ಕಣ್ಣಿಟ್ಟು ಹುಡುಕಿದರೂ ಅದು ದೊರೆಯುವ ಹಾಗೇ ಇಲ್ಲ. ಆದರೆ ಹಾಲಿಗೆ ಹೆಪ್ಪು ಹಾಕಿ ಮೊಸರು ಮಾಡಿ ಬೆಣ್ಣೆ ತೆಗೆದು ಅದನ್ನು ನೀರಿನಲ್ಲಿ ಇಟ್ಟರೆ, ಅದು ಅಲ್ಲಿ ತೇಲಲಾರಂಭಿಸುತ್ತದೆ. ಬೆಣ್ಣೆ ತೆಗೆಯಬೇಕಾದರೆ ಮೊದಲು ನಿರ್ಜನ ಪ್ರದೇಶದಲ್ಲಿ ಹಾಲಿಗೆ ಹೆಪ್ಪು ಹಾಕಿ ಇಡಬೇಕು; ಅದನ್ನು ಅತಿಯಾಗಿ ಅಲುಗಾಡಿಸುತ್ತಿದ್ದರೆ ಅದು ಮೊಸರಾಗದು. ಬಳಿಕ ಉಳಿದ ಎಲ್ಲಾ ಕೆಲಸ ಕಾರ್ಯಗಳನ್ನೂ ಕಟ್ಟಿಟ್ಟು, ನಿರ್ಜನಪ್ರದೇಶದಲ್ಲಿ ಕುಳಿತು ಅದನ್ನು ಕಡೆಯಬೇಕು. ಆಗ ಬೆಣ್ಣೆ ತೆಗೆಯಲು ಸಾಧ್ಯವಾಗುತ್ತದೆ.

ಶ್ರೀಮಂತರ ಮನೆದಾಸಿ ಎಲ್ಲಾ ಕೆಲಸ ಕಾರ್ಯಗಳನ್ನೂ ಮಾಡುತ್ತಾಳೆ, ಆದರೆ ಆಕೆಯ ಮನಸ್ಸು ಮಾತ್ರ ಹಳ್ಳಿಯಲ್ಲಿರುವ ತನ್ನ ಮನೆಯ ಕಡೆಗೇ. ಯಜಮಾನನ ಮಕ್ಕಳನ್ನು ತನ್ನವೆಂದೇ ಬೆಳೆಸುತ್ತಾಳೆ. ಅಷ್ಟೇ ಅಲ್ಲ, ಅವನ್ನು ಕರೆಯುತ್ತಾಳೆ, "ನನ್ನ ರಾಮ, ನನ್ನ ಹರಿ" ಎಂಬುದಾಗಿ. ಆದರೆ ಅವಾವುವೂ ತನ್ನವಲ್ಲವೆಂಬುದು ಆಕೆಗೆ ಹೃದಯದಲ್ಲಿ ಚೆನ್ನಾಗಿ ಗೊತ್ತಿದೆ. ಆಮೆ ನೀರಲ್ಲಿ ಈಜಾಡುತ್ತಿರುತ್ತದೆ. ಆದರೆ ಅದರ ಮನಸ್ಸೆಲ್ಲಿದೆ ಗೊತ್ತೆ ನಿನಗೆ? ತನ್ನ ಮೊಟ್ಟೆಗಳಿರುವ ದಡದಲ್ಲಿ.

ಭಗವಂತನಲ್ಲಿ ಭಕ್ತಿ ಬೆಳೆಸಿಕೊಳ್ಳುವುದಕ್ಕೆ ಮುನ್ನ ಸಂಸಾರಕ್ಕೆ ಕಾಲಿಟ್ಟೆ ಎಂದರೆ, ಇನ್ನೂ ಅಧಿಕಾಧಿಕವಾಗಿ ಕಷ್ಟಪರಂಪರೆಗಳಿಗೆ ಈಡಾಗುವೆ. ಶೋಕ, ತಾಪ, ವಿಪತ್ತು ಇವುಗಳಿಂದ ಸಂಪೂರ್ಣ ಬೆಂದು ಬೆಂಡಾಗಿ ಹೋಗಿವೆ. ವಿಷಯಚಿಂತನೆ ಮಾಡಿದಷ್ಟೂ ಅವುಗಳಲ್ಲಿ ಆಸಕ್ತಿಯೂ ಬೆಳೆಯುತ್ತಾ ಹೋಗುತ್ತದೆ. ಮೊದಲು ಕೈಗೆ ಎಣ್ಣೆ ಸವರಿಕೊಂಡು ಹಲಸಿನಹಣ್ಣು ಬಿಡಿಸಬೇಕು. ಇಲ್ಲದಿದ್ದರೆ ಕೈಗೆ ಅಂಟು ಹತ್ತಿಕೊಂಡುಬಿಡುತ್ತದೆ. ಭಗವದ್ಭಕ್ತಿ ಎಂಬ ಎಣ್ಣೆಯನ್ನು ಮೊದಲು ಹವಣಿಸಿಕೊಂಡು ಬಳಿಕ ಸಾಂಸಾರಿಕ ಕೆಲಸಕಾರ್ಯಗಳಲ್ಲಿ ತೊಡಗಬೇಕು. ಭಗವಂತನ ಧ್ಯಾನದೊಡನೆ ವಿಚಾರ ಮಾಡುವುದೂ ಅತ್ಯಂತ ಆವಶ್ಯಕ. ಕಾಮ ಕಾಂಚನ ಅನಿತ್ಯ. ಭಗವಂತನೇ ಏಕ ಮಾತ್ರ ವಸ್ತು. ಹಣದಿಂದ ಏನು ದೊರೆಯುತ್ತದೆ? ಅನ್ನಾಹಾರ, ಬಟ್ಟೆಬರೆ, ಮನೆಮಠ—ಇಷ್ಟು ಮಾತ್ರ. ಭಗವಂತನ ಸಾಕ್ಷಾತ್ಕಾರ ಎಂದಿಗೂ ದೊರೆಯದು. ಆದ್ದರಿಂದ ಹಣ ಜೀವನದ ಚರಮೋದ್ದೇಶವಾಗಲಾರದು.

ಶ್ರೀರಾಮಕೃಷ್ಣ ವಚನವೇದ ದಿಂದ

**ಶೀರ್ಷಿಕೆಯ ಚಿತ್ರ**

**ದಕ್ಷಿಣೇಶ್ವರದ ಕಾಳೀಮಂದಿರದಲ್ಲಿರುವ ಶ್ರೀರಾಮಕೃಷ್ಣರ ಕೊಠಡಿ**